## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 403 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 19.02.2024 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

| ಪ್ರಶ್ನೆ | ಉತ್ತರ |
|---|---|
| (ಅ) ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳು ಯಾವುವು; ಫಲಾನುಭವಿಗಳ ಆಯ್ಕೆ ಇರುವ ಮಾನದಂಡಗಳು ಯಾವುವು (ವಿವರ ನೀಡುವುದು) | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br>ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಪ್ರಸಕ್ತ ಸಾಲಿನಿಂದ ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 55 ಕೈತಇ 2023, ದಿನಾಂಕ: 03.06.2023ರ ಅನ್ವಯ ಯುವನಿಧಿ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, 2023 ರಲ್ಲಿ ಪದವಿ ಅಥವಾ ಡಿಪ್ಲೋಮಾ ಪಾಸಾಗಿ 180 ದಿನಗಳವರೆಗೆ ಉದ್ಯೋಗ ದೊರೆಯದೇ ಇದ್ದಲ್ಲಿ ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆ ನೀಡಲಾಗುತ್ತಿದೆ.<br>ಯುವನಿಧಿ ಯೋಜನೆಯಡಿ ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳ ಕುರಿತಂತೆ ಸರ್ಕಾರದ ಆದೇಶದ ಪ್ರತಿ ಹಾಗೂ ಯುವನಿಧಿ ಯೋಜನೆಯ ಮಾರ್ಗಸೂಚಿಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ.<br>**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯದ ಯುವ ಜನತೆಗೆ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ವಿವಿಧ ವೃತ್ತಿಗಳಡಿ ವಿವಿಧ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ನೀಡಲಾಗಿದ್ದು, ಈ ಯೋಜನೆಗಳಡಿ 18-35 ವರ್ಷದೊಳಗಿನ ಯುವ ಜನತೆಯು ವಿದ್ಯಾರ್ಹತೆಗೆ ತಕ್ಕಂತೆ ಆಯ್ಕೆಯ ಜಾಬ್‌ರೋಲ್‌ಗಳಿಗೆ ಅರ್ಜಿಯನ್ನು ಸಲ್ಲಿಸಿ ತರಬೇತಿಯನ್ನು ಪಡೆಯಬಹುದಾಗಿದೆ.<br>**ರಾಷ್ಟ್ರೀಯ ಜೀವನೋಪಾಯ ಅಭಿಯಾನ**<br>**ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (ಡೇ-ಎನ್.ಯು.ಎಲ್.ಎಂ)**<br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ದೀನ್ ದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.<br>ಅಭಿಯಾನದಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜಾರಿಗೊಳಿಸಲಾಗುತ್ತಿರುತ್ತದೆ.<br>**1) ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:**<br>ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಹಾಗೂ ಸ್ವ-ಸಹಾಯ ಸಂಘಗಳಿಗೆ |

| | |
|---|---|
| | ರೂ.10,000/- ಮತ್ತು ಒಕ್ಕೂಟಗಳಿಗೆ ರೂ.50,000/- ಆವರ್ತಕ ನಿಧಿ ವಿತರಣೆ ಹಾಗೂ ಸಂಘ ಮತ್ತು ಒಕ್ಕೂಟದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.<br><br>**2) ಸ್ವಯಂ ಉದ್ಯೋಗ ಕಾರ್ಯಕ್ರಮ:**<br><br>ಸದರಿ ಉಪಘಟಕದಡಿ ವೈಯುಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ. 2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷದವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು.<br><br>3) **ನಗರದ ವಸತಿ ರಹಿತರಿಗೆ ಆಶ್ರಯ:**<br><br>ಸದರಿ ಉಪಘಟಕದಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ. ಆಶ್ರಯವನ್ನು ಕಲ್ಪಿಸಲಾಗುವುದು.<br><br>**4) ನಗರದ ಬೀದಿ ವ್ಯಾಪರಸ್ಥರಿಗೆ ಬೆಂಬಲ:**<br><br>ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ. ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.<br><br>**5) ಸಾಮರ್ಥ್ಯ ಅಭಿವೃದ್ದಿ ಮತ್ತು ತರಬೇತಿ:**<br><br>ಸದರಿ ಉಪಘಟಕದಡಿ ಅಭಿಯಾನವನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ/ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.<br><br>**ಫಲಾನುಭವಿಗಳಿಗೆ ಇರುವ ಮಾನದಂಡಗಳು**<br><br>1. ನಗರ ಪ್ರದೇಶದಲ್ಲಿ ವಾಸಿಸುತ್ತಿರಬೇಕು.<br>2. ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿರಬೇಕು.<br>3. ಆಧಾರ್ ಸಂಖ್ಯೆಯನ್ನು ಹೊಂದಿರಬೇಕು.<br>4. ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ಬಗ್ಗೆ ವಾಸ ಸ್ಥಳದ ದಾಖಲಾತಿ ಹೊಂದಿರಬೇಕು.<br>5. ರೂ.1,20,000/- ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರಬೇಕು.<br><br>**ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆ**<br>**(ಡೇ-ಎನ್.ಆರ್.ಎಲ್.ಎಂ)**<br><br>ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯಡಿ ಪ್ರಮುಖವಾಗಿ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಿ ಸ್ವಾವಲಂಬನೆಯ ಜೀವನ ಸಾಗಿಸುವಲ್ಲಿ, ರಾಜ್ಯದಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಅವರಿಗೆ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸಿ ಬೆಂಬಲಿಸಲಾಗುತ್ತಿದೆ.<br><br>1.ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ (NRLM)<br><br>2. ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY) |

| | |
|---|---|
| | 3. ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (RSETI)<br>4. ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (NRETP)<br>5. ಆರಂಭಿಕ ಗ್ರಾಮೀಣ ಉದ್ಯಮಶೀಲತಾ ಯೋಜನೆ (SVEP)<br><br>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳಂತೆ 60:40 ಅನುಪಾತದ ಅನುದಾನದಡಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದ 233 ತಾಲ್ಲೂಕುಗಳಲ್ಲಿ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಈ ಅಭಿಯಾನದ ಪ್ರಮುಖ ಉದ್ದೇಶವು ಗ್ರಾಮೀಣ ಬಡತನ ಕಡಿಮೆಗೊಳಿಸಲು ಮಹಿಳೆಯರನ್ನು ಅಭಿಯಾನದಡಿ ಸ್ವ ಸಹಾಯ ಗುಂಪುಗಳ ವ್ಯಾಪ್ತಿಗೆ ತರುವ ಮೂಲಕ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳನ್ನು ರಚಿಸಿ ಸ್ವ-ನಿಯಂತ್ರಿತ, ಸ್ವ-ಆಡಳಿತವನ್ನು ನಡೆಸುವಲ್ಲಿ ಸಮುದಾಯಧಾರಿತ ಸಂಸ್ಥೆಗಳನ್ನು ಬಲವರ್ಧನೆಗೊಳಿಸಿ, ಸದರಿ ಸಂಸ್ಥೆಗಳ ಮುಖಾಂತರ ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಜೀವನೋಪಾಯ ಚಟುವಟಿಕೆಯನ್ನು ನೀಡಿ, ಸುಸ್ಥಿರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೊಳಿಸುವುದಾಗಿರುತ್ತದೆ. ಈ ಸಮುದಾಯ ಆಧಾರಿತ ಸಂಸ್ಥೆಯಾಗಿರುವ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಚಟುವಟಿಕೆಗಳನ್ನು ಕಾರ್ಯಕಾರಿ ಸಮಿತಿಯು ನಿರ್ವಹಿಸುತ್ತಿದೆ.<br><br>**1) ಎನ್.ಆರ್.ಎಲ್.ಎಂ ಕಾರ್ಯಕ್ರಮದ ಫಲಾನುಭವಿಗಳನ್ನು ಯೋಜನೆಯ ಈ ಕೆಳಗಿನ ಮಾನದಂಡಗಳಂತೆ ಆಯ್ಕೆ ಮಾಡಲಾಗುತ್ತದೆ.**<br>1. ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ 2011ರನ್ವಯ ಗ್ರಾಮದ ಅರ್ಹ ಬಡ ಫಲಾನುಭವಿಗಳಾಗಿರಬೇಕು.<br>2. ಮುಖ್ಯವಾಗಿ ವಿಕಲಚೇತನರು/ವಿಧವೆಯರು, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.<br>3. ಫಲಾನುಭವಿಗಳ ಕಟುಂಬದ ವಾರ್ಷಿಕ ಆದಾಯ ರೂ.1.00 ಲಕ್ಷ ಕ್ಕಿಂತ ಕಡಿಮೆಯಿರಬೇಕು.<br><br>**2) ಎನ್.ಆರ್.ಇ.ಟಿ.ಪಿ ಕಾರ್ಯಕ್ರಮವನ್ನು ಗದಗ, ಉತ್ತರ ಕನ್ನಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಆಯ್ದ 15 ತಾಲ್ಲೂಕುಗಳಲ್ಲಿ ಈ ಕೆಳಗಿನ ಮಾನದಂಡಗಳಂತೆ ಆಯ್ಕೆ ಮಾಡಲಾಗುತ್ತದೆ.**<br>1. ಸಂಜೀವಿನಿ ಕಾರ್ಯಕ್ರಮಗಳು ಸತತವಾಗಿ 3 ವರ್ಷ ಅನುಷ್ಠಾನಗೊಂಡಿರಬೇಕು.<br>2. ಸಾಮಾಜಿಕ ಸಂಘಟನೆ ಚಟುವಟಿಕೆಗಳು ಪೂರ್ಣಗೊಂಡಿರಬೇಕು.<br>3. ವಿವಿಧ ಸ್ವ-ಸಹಾಯ ಗುಂಪು, ವಾರ್ಡ್ ಮಟ್ಟದ ಒಕ್ಕೂಟಗಳು, ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ರಚನೆಯಾಗಿ ವಿವಿಧ ತರಬೇತಿಗಳನ್ನು ಪಡೆದುಕೊಂಡಿರಬೇಕು.<br>4. ಎಲ್ಲಾ ಹಂತದಲ್ಲಿ ಸಿಬ್ಬಂದಿಗಳ ಆಯ್ಕೆಯಾಗಿರಬೇಕು.<br><br>**3) ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯನ್ನು ರಾಜ್ಯದಲ್ಲಿ 2013-14ರಿಂದ ಯೋಜನಾ ಅನುಷ್ಠಾನ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಡಿಡಿಯು-ಜಿಕೆವೈ ಕಾರ್ಯಕ್ರಮದ ಫಲಾನುಭವಿಗಳನ್ನು ಯೋಜನೆಯ ಈ ಕೆಳಗಿನ ಮಾನದಂಡಗಳಂತೆ ಆಯ್ಕೆ ಮಾಡಲಾಗುತ್ತದೆ.**<br>1. ಬಿಪಿಎಲ್ ಕಾರ್ಡ್ ಕಡ್ಡಾಯವಾಗಿರಬೇಕು. |

| | |
|---|---|
| | 2. 18–35 ವಯೋಮಾನದ ಗ್ರಾಮೀಣ ಕುಟುಂಬಗಳ ಯುವಜನರಾಗಿರಬೇಕು.<br>3. ಇತರೆ ವಿಶೇಷ ಅಭ್ಯರ್ಥಿಗಳಾದ ವಿಶೇಷ ಚೇತನರು, ಬುಡಕಟ್ಟು ಜನಾಂಗದವರು, ಮಾನವ ಕಳ್ಳ ಸಾಗಾಣಿಕೆ ಭಾದಿತರು ಮುಂತಾದವುಗಳಿಗೆ 45 ವರ್ಷದ ವಯೋಮಿತಿ ಸಡಿಲಿಕೆ ಇರುತ್ತದೆ.<br>4. ಸ್ವ–ಸಹಾಯ ಗುಂಪಿಗೆ ಆದ್ಯತೆ ನೀಡಲಾಗುವುದು.<br>5. ವಿವಿಧ ಕೋರ್ಸ್ ಗಳನ್ವಯ ವಿದ್ಯಾರ್ಹತೆ ಹೊಂದಿರಬೇಕು. ಕನಿಷ್ಠ 5ನೇ ತರಗತಿ ವ್ಯಾಸಂಗ ಮಾಡಿದವರಿಗೂ ಅವಕಾಶವಿರುತ್ತದೆ.<br>**4) ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೆಟಿ) ಕಾರ್ಯಕ್ರಮದಡಿ ಸ್ವಯಂ ಉದ್ಯೋಗ ತರಬೇತಿಗಳನ್ನು ನೀಡಲಾಗುತ್ತಿದ್ದು, ಯೋಜನೆಯ ಈ ಕೆಳಗಿನ ಮಾನದಂಡಗಳಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.**<br>1. 18 ರಿಂದ 45 ವರ್ಷದ ವಯಸ್ಸಿನವರಾಗಿರಬೇಕು.<br>2. ಬಿಪಿಎಲ್ ಕಾರ್ಡ್ ದಾರರಾಗಿರಬೇಕು.<br>3. ಗ್ರಾಮೀಣ ಪ್ರದೇಶದವರಾಗಿರಬೇಕು.<br>4. ಓದು ಬರಹ ತಿಳಿದಿರಬೇಕು.<br>5. ಕಂಪ್ಯೂಟರ್ ತರಬೇತಿಗೆ ಕನಿಷ್ಠ ಪಿಯುಸಿ ವಿದ್ಯಾರ್ಹತೆ ಹೊಂದಿರಬೇಕು.<br>**5) ಆರಂಭಿಕ ಗ್ರಾಮೀಣ ಉದ್ಯಮಶೀಲತಾ ಯೋಜನೆ (ಎಸ್.ವಿ.ಇ.ಪಿ) ಕಾರ್ಯಕ್ರಮವನ್ನು ರಾಜ್ಯದಲ್ಲಿ 2021–22ನೇ ಸಾಲಿನ ಟಿ, ನರಸೀಪುರ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ 2022–23ನೇ ಸಾಲಿನಿಂದ ರಾಮನಗರ, ದೇವನಹಳ್ಳಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಮುಖವಾಗಿ ಮಹಿಳೆಯರು ನಡೆಸುತ್ತಿರುವ ಉದ್ಯಮಗಳನ್ನು ಮೇಲ್ದರ್ಜೇಗೇರಿಸಲು ಅವಶ್ಯಕ ಹಾಗೂ ಸೂಕ್ತ ಬೆಂಬಲಗಳನ್ನು ಒದಗಿಸುವುದಾಗಿರುತ್ತದೆ. ಈ ಯೋಜನೆಯು 4 ವರ್ಷದ ಕಾರ್ಯಕ್ರಮವಾಗಿರುತ್ತದೆ.**<br>1. ಈ ಯೋಜನೆಯಡಿ ಫಲಾನುಭವಿಯಾಗಲು ಮಹಿಳೆಯರು ಸ್ವ–ಸಹಾಯ ಗುಂಪಿನ ಸದಸ್ಯರಾಗಿರಬೇಕು.<br>**ಸಿಡಾಕ್**<br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ – ಸಿಡಾಕ್ ಸಂಸ್ಥೆಯಿಂದ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 18 ರಿಂದ 50 ವರ್ಷ ವಯೋಮಾನದಲ್ಲಿರುವ ಆಸಕ್ತರಿಂದ ಅರ್ಜಿಗಳನ್ನು ಅಹ್ವಾನಿಸಿ ಕಾರ್ಯಕ್ರಮಗಳಿಗೆ ಆಯ್ಕೆ ಮಾಡಲಾಗುತ್ತದೆ. |
| (ಆ) ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳಿಂದ ಉದ್ಯೋಗ ಸೃಷ್ಟಿಗೆ ಅವಕಾಶಗಳಿವೆಯೇ; ಅವಕಾಶಗಳಿದ್ದಲ್ಲಿ, ಯಾವ ರೀತಿಯ ಅವಕಾಶಗಳಿವೆ ಎಂಬುದರ ಬಗ್ಗೆ ಮಾಹಿತಿ ನೀಡುವುದು. | **ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**<br>ಮೇಲ್ಕಂಡ ಯೋಜನೆಯ ಮಾರ್ಗಸೂಚಿಗಳನ್ವಯ ಎನ್.ಎಸ್.ಕ್ಯೂ.ಎಫ್ ನಿಯಮಾವಳಿಗಳನ್ವಯ ತರಬೇತಿಯನ್ನು ಮಾನ್ಯತೆ ಪಡೆದು ಕೈಗೊಳ್ಳಲು ತರಬೇತುದಾರ ಸಂಸ್ಥೆಗಳಿಗೆ ತರಬೇತಿ ಕಾರ್ಯಾದೇಶವನ್ನು ನೀಡಲಾಗಿದ್ದು, ಒಟ್ಟಾರೆ ತರಬೇತಿ ಪಡೆದ ಅಭ್ಯರ್ಥಿಗಳ ಪೈಕಿ ಶೇ70 ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸುವ ಷರತ್ತನ್ನು ತರಬೇತುದಾರ ಸಂಸ್ಥೆಗಳಿಗೆ ವಿಧಿಸಲಾಗಿರುತ್ತದೆ ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಸಲಾಗುವ ಉದ್ಯೋಗ ಮೇಳಗಳ ಮೂಲಕವೂ ತರಬೇತಿ ಪಡೆದ ಅಭ್ಯರ್ಥಿಗಳು ಉದ್ಯೋಗಾವಕಾಶವನ್ನು ಪಡೆಯಬಹುದಾಗಿದೆ. |

| | |
|---|---|
| | (ಕೌಶಲ್ಯ ಸಂಪರ್ಕ) ಪೋರ್ಟಲ್ Skill Connect:ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದ್ದು, ಅದನ್ನು ಮಾನ್ಯ ಮುಖ್ಯಮಂತ್ರಿಗಳು/ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ದಿನಾಂಕ:01.12.2022ರಲ್ಲಿ ಉದ್ಘಾಟಿಸಿರುತ್ತಾರೆ. 8909ಕ್ಕೂ ಅಧಿಕ ಉದ್ಯೋಗಾವಕಾಶ ಹಾಗೂ ಶಿಶಿಕ್ಷು ತರಬೇತಿಯ ಅವಕಾಶಗಳು ಲಭ್ಯವಿದ್ದು, 50ಕ್ಕೂ ಅಧಿಕ ಕಂಪನಿಗಳು ಹಾಗೂ ಭಾಗಿದಾರತ್ವ ಸಂಸ್ಥೆಗಳನ್ನು ಒಳಗೊಂಡಿದ್ದು, 14557 ಅಭ್ಯರ್ಥಿಗಳು ನೋಂದಣಿಗೊಂಡಿರುತ್ತಾರೆ.<br><br>**ರಾಷ್ಟ್ರೀಯ ಜೀವನೋಪಾಯ ಅಭಿಯಾನ**<br><br>**ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (ಡೇ-ಎನ್.ಯು.ಎಲ್.ಎಂ)**<br><br>ಡೇ-ಎನ್‌ಯುಎಲ್‌ಎಂ ಅಭಿಯಾನದ ಸ್ವಯಂ ಉದ್ಯೋಗ ಕಾರ್ಯಕ್ರಮದ ಉಪಘಟಕದಡಿ ಸ್ವಯಂ ಉದ್ಯೋಗ ಮತ್ತು ಗುಂಪು ಕಿರು ಉದ್ದಿಮೆಯನ್ನು ಪ್ರಾರಂಭಿಸಲು ಈ ಕೆಳಕಂಡಂತೆ ಅವಕಾಶವಿರುತ್ತದೆ.<br><br>• ಸದರಿ ಉಪಘಟಕದಡಿ ವೈಯುಕ್ತಿಕ ಕಿರು ಉದ್ದಿಮೆ. ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು.<br><br>**ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆ (ಡೇ-ಎನ್.ಆರ್.ಎಲ್.ಎಂ)**<br><br>• ರಾಷ್ಟ್ರೀಯ ಗ್ರಾಮೀಣ ಜೀವನೋಪಾಯದಡಿ ಮಹಿಳೆಯರನ್ನು ಸ್ವ-ಸಹಾಯ ಗುಂಪುಗಳಾಗಿ ರಚನೆ ಮಾಡುವ ಮೂಲಕ ಅವರಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ನೀಡಿ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸಲು ನಿರಂತರ ಬೆಂಬಲಿಸಲಾಗುತ್ತಿದೆ.<br>• ರಾಜ್ಯದಲ್ಲಿ ಅಭಿಯಾನದ ವ್ಯಾಪ್ತಿಗೆ 352805 ಸ್ವ-ಸಹಾಯ ಗುಂಪುಗಳನ್ನು ತರಲಾಗಿದೆ. ಮಹಿಳೆಯರು ಸ್ವ ಉದ್ಯೋಗ ಕೈಗೊಳ್ಳಲು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಮೂಲಕ ರೂ.1.50 ಲಕ್ಷ ಸಮುದಾಯ ಬಂಡವಾಳ ನಿಧಿಯನ್ನು ಸ್ವ-ಸಹಾಯ ಗುಂಪುಗಳಿಗೆ ಅನುದಾನವಾಗಿ ನೀಡಲಾಗುತ್ತಿದೆ. ರಾಜ್ಯದಲ್ಲಿ ಇದುವರೆಗೆ 116045 ಸ್ವ ಸಹಾಯ ಗುಂಪುಗಳಿಗೆ ಸುಸ್ಥಿರ ಜೀವನೋಪಾಯ ಉದ್ಯೋಗಗಳನ್ನು ಸೃಷ್ಟಿಸಿಕೊಳ್ಳಲು ರೂ.1201.59 ಕೋಟಿ ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗಿದೆ.<br>• ಹೊಸದಾಗಿ ರಚನೆಯಾಗಿರುವ ಸ್ವ ಸಹಾಯ ಗುಂಪುಗಳಿಗೆ ಅಭಿಯಾನದಡಿ ಸುತ್ತು ನಿಧಿಯನ್ನು ಗರಿಷ್ಠ 30 ಸಾವಿರವರೆಗೆ ಒದಗಿಸಲಾಗುತ್ತದೆ. ರಾಜ್ಯದಲ್ಲಿ 37954 ಸ್ವ-ಸಹಾಯ ಗುಂಪುಗಳಿಗೆ ಸುಸ್ಥಿರ ಜೀವನೋಪಾಯ ಉದ್ಯೋಗಗಳನ್ನು ಸೃಷ್ಟಿಸಿಕೊಳ್ಳಲು ರೂ.5664.70 ಕೋಟಿ ಸುತ್ತು ನಿಧಿಯನ್ನು ನೀಡಲಾಗಿದೆ. |

- ಮುಂದುವರೆದು ಸ್ವ-ಸಹಾಯ ಗುಂಪಿನ ಮಹಿಳೆಯರು ಉದ್ಯೋಗ ಚಟುವಟಿಕೆ ಕೈಗೊಂಡು ಉದ್ದಿಮೆದಾರರನ್ನಾಗಿಸಲು ಅಭಿಯಾನದ ಮೂಲಕ ವ್ಯಾಪಾರ ಯೋಜನೆ ತಯಾರಿಸಿ ಬ್ಯಾಂಕ್ ಸಾಲ ಸೌಲಭ್ಯವನ್ನು ಪಡೆದು ಉದ್ಯೋಗ ಕೈಗೊಳ್ಳಲು ನಿರಂತರವಾಗಿ ಬೆಂಬಲಿಸಲಾಗುತ್ತಿದೆ. ಮಹಿಳೆಯರು ಉತ್ಪನ್ನಗಳ ಗುಟಮಟ್ಟ ಸುಧಾರಣೆಗೆ ಮೌಲ್ಯವರ್ಧನೆ, ಉತ್ತಮ ಪ್ಯಾಕಿಂಗ್, ಬ್ರ್ಯಾಡಿಂಗ್ ಮತ್ತು ಮಾರುಕಟ್ಟೆ ಕೌಶಲ್ಯ ಕುರಿತು ಸೂಕ್ತ ತರಬೇತಿಗಳನ್ನು ಒದಗಿಸಿ ಅವರು ಕೈಗೊಳ್ಳುತ್ತಿರುವ ಸುಸ್ಥಿರ ಜೀವನೋಪಾಯ ಉದ್ಯೋಗಗಳನ್ನು ಮೇಲ್ದರ್ಜೆಗೇರಿಸಲು ನಿರಂತರ ತಾಂತ್ರಿಕ ಬೆಂಬಲ ನೀಡಲಾಗುತ್ತಿದೆ.
- ಪ್ರಮುಖವಾಗಿ ಅಭಿಯಾನದಡಿ ಸ್ವ-ಸಹಾಯ ಗುಂಪಿನ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಹಳ್ಳಿ ಸಂತೆ, ಮಾಸಿಕ ಸಂತೆ, ಜಿಲ್ಲಾ ಮತ್ತು ರಾಜ್ಯ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸಲಾಗುತ್ತಿದೆ. ರಾಷ್ಟ್ರ ಮಟ್ಟದಲ್ಲಿ ಸರಸ್ ಮೇಳವನ್ನು ಆಯೋಜಿಸಲಾಗುತ್ತಿದೆ ಮತ್ತು ಬೇರೆ ರಾಜ್ಯಗಳಲ್ಲಿ ನಡೆಯುವ ರಾಷ್ಟ್ರ ಮಟ್ಟದ ಸರಸ್ ಮೇಳಗಳಿಗೆ ರಾಜ್ಯದ ಮಹಿಳೆಯರನ್ನು ನಿಯೋಜಿಸುವ ಮೂಲಕ ಸುಸ್ಥಿರ ಜೀವನೋಪಾಯ ಉದ್ಯೋಗಗಳ ಸೃಷ್ಟಿಗೆ ಅಭಿಯಾನದಡಿ ನಿರಂತರ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ.
- ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (NRETP) ಕಾರ್ಯಕ್ರಮವನ್ನು ರಾಜ್ಯದ ಗದಗ, ಉತ್ತರ ಕನ್ನಡ ಮತ್ತು ತುಮಕೂರು ಜಿಲ್ಲೆಯ ಆಯ್ದ 15 ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ಯೋಜನೆಯಡಿ ಸ್ವ ಸಹಾಯ ಗುಂಪಿನ ಮಹಿಳೆಯರು ಕೈಗೊಂಡಿರುವ ಉದ್ಯೋಗಗಳನ್ನು ಮೇಲ್ದರ್ಜೆಗೇರಿಸಲು ಸೂಕ್ತ ತರಬೇತಿ ಮತ್ತು ವ್ಯಾಪಾರ ಯೋಜನೆ ತಯಾರಿಸಲು ತಾಂತ್ರಿಕ ಬೆಂಬಲ ನೀಡಿ ಬ್ಯಾಂಕ್ ಲಿಂಕೇಜ್ ಸೌಲಭ್ಯಗಳನ್ನು ಕಲ್ಪಿಸಿ ಹೆಚ್ಚಿನ ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳಲು ಅವಕಾಶಗಳನ್ನು ಸೃಷ್ಟಿಸಲಾಗುತ್ತಿದೆ.
- ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಗ್ರಾಮೀಣ ಭಾಗದ ಯುವಕ ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಒದಗಿಸಿ ವೇತನಾಧರಿತ ಉದ್ಯೋಗಗಳನ್ನು ಕಲ್ಪಿಸಲಾಗುತ್ತಿದೆ. ಈ ತರಬೇತಿಗಳನ್ನು ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು ಒಟ್ಟು ವಿವಿಧ ರೀತಿಯ 24 ವಿಷಯಗಳಡಿ ವಸತಿಸಹಿತ/ವಸತಿರಹಿತ ಉಚಿತ ತರಬೇತಿ ಕೋರ್ಸಗಳು ಲಭ್ಯವಿರುತ್ತವೆ. ಯೋಜನೆಯಡಿಯಲ್ಲಿ ರಾಜ್ಯದಲ್ಲಿ 25 ರೀತಿಯ ಕೌಶಲ್ಯ ತರಬೇತಿಗಳಿದ್ದು ಇದುವರೆಗೂ ಒಟ್ಟು 54673 ತರಬೇತಿ ನೀಡಲಾಗಿರುತ್ತದೆ ಹಾಗೂ ತರಬೇತಿ ಹೊಂದಿರುವ ಅಭ್ಯರ್ಥಿಗಳಲ್ಲಿ 28579 ಅಭ್ಯರ್ಥಿಗಳು ಉದ್ಯೋಗ ಪಡೆದಿರುತ್ತಾರೆ.
- ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಯೋಜನೆ ಕಾರ್ಯಕ್ರಮದಡಿ ಯುವಕ ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿಗಳನ್ನು ಕೈಗೊಂಡು ಉದ್ಯೋಗಗಳನ್ನು ಸೃಷ್ಟಿಸಿಕೊಳ್ಳಲು ಅವಕಾಶವಿರುತ್ತದೆ. ಈ ತರಬೇತಿಗಳನ್ನು ಜಿಲ್ಲಾ ಲೀಡ್ ಬ್ಯಾಂಕ್ ತರಬೇತಿ ಕೇಂದ್ರಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದ್ದು ರಾಜ್ಯದಲ್ಲಿ 31 ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ವಿವಿಧ ಬಗೆಯ 21 ವಸತಿಸಹಿತ/ವಸತಿರಹಿತ ಸ್ವಯಂ ಉದ್ಯೋಗ ತರಬೇತಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಯೋಜನೆಯಡಿ ಒಟ್ಟು 230014 ಅಭ್ಯರ್ಥಿಗಳು ಸ್ವ-ಉದ್ಯೋಗ ತರಬೇತಿ ಪಡೆದು ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸಲಾಗಿದೆ.

- ಆರಂಭಿಕ ಗ್ರಾಮೀಣ ಉದ್ಯಮಶೀಲತಾ ಯೋಜನೆ (SVEP)ಯು 4 ವರ್ಷದ ಕಾರ್ಯಕ್ರಮವಾಗಿದ್ದು ರಾಜ್ಯದ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕು, ಮೈಸೂರು ಜಿಲ್ಲೆಯ ಟಿ.ನರಸೀಪುರ, ರಾಮನಗರ ಜಿಲ್ಲೆಯ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ಯೋಜನೆಯಡಿ ಮಹಿಳೆಯರನ್ನು ಉದ್ದಿಮೆದಾರರನ್ನಾಗಿಸುವುದು ಹಾಗೂ ಪ್ರಸ್ತುತ ಕೈಗೊಂಡಿರುವ ಉದ್ದಿಮೆಗಳನ್ನು ಮೇಲ್ದರ್ಜೆಗೇರಿಸಲು ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಿ ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಈಗಾಗಲೇ ಯೋಜನೆಯಡಿ 946 ಉದ್ದಿಮೆದಾರರಿದ್ದು, 946 ಉದ್ದಿಮೆದಾರರಿಗೆ ಸಮುದಾಯ ಉದ್ಯಮನಿಧಿ ಮತ್ತು ವಿವಿಧ ಕೌಶಲ್ಯ ತರಬೇತಿಯನ್ನು ನೀಡಿ ಬೆಂಬಲಿಸಲಾಗಿತ್ತು. ಮುಂದಿನ ಮೂರು ವರ್ಷಗಳಲ್ಲಿ 9000 ಮಹಿಳೆಯರಿಗೆ ಉದ್ದಿಮೆದಾರರನ್ನಾಗಿಸುವ ಗುರಿ ಹೊಂದಲಾಗಿದೆ.

ಒಟ್ಟಾರೆ ಈ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು ಯೋಜನೆಯ ಸಿಬ್ಬಂದಿಗಳು ಮತ್ತು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಡಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು, ಕೃಷಿ ಸಖಿ, ಪಶು ಸಖಿ, ಉದ್ಯೋಗ ಸಖಿಯರು ಕ್ಷೇತ್ರ ಮಟ್ಟದಲ್ಲಿ ಮನೆ ಮನೆಗೆ ತೆರಳಿ ಆಯಾ ಕುಟುಂಬಗಳ ಬೇಡಿಕೆ ಅನುಸಾರ ಉದ್ಯೋಗ ಸೃಷ್ಟಿಗೆ ಸಮಾಲೋಚನೆಗಳನ್ನು ಏರ್ಪಡಿಸಿ ಯೋಜನೆಯ ಮತ್ತು ಇತರ ಸಹ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಸಮಾಜ ಕಲ್ಯಾಣ, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಇಲಾಖೆ, ಎಂಜಿನರೇಗಾ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೌಲಭ್ಯಗಳನ್ನು ಪಡೆಯಲು ನಿರಂತರ ಬೆಂಬಲಿಸುವ ಮೂಲಕ ಪ್ರತಿಯೊಬ್ಬ ಮಹಿಳೆಯು ಜೀವನೋಪಾಯ ಸ್ವ ಉದ್ಯೋಗಗಳನ್ನು ಕೈಗೊಳ್ಳುವಲ್ಲಿ ನಿರಂತರ ಬೆಂಬಲಿಸಲಾಗುತ್ತಿದೆ.

**ಸಿಡಾಕ್**

ತರಬೇತಿ ಹೊಂದಿದ ಅಭ್ಯರ್ಥಿಗಳು ಸ್ವ-ಉದ್ಯೋಗಗಳನ್ನು ಕೈಗೊಳ್ಳುವುದರಿಂದ ಉದ್ಯೋಗ ಸೃಷ್ಟಿಗೆ ಅವಕಾಶವಿರುತ್ತದೆ.

(ಇ) ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳು ಯಾವುವು; ಇದಕ್ಕೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನ ಎಷ್ಟು? (ಯೋಜನೆ/ಕಾರ್ಯಕ್ರಮವಾರ ವಿವರ ನೀಡುವುದು)

**ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**

ಕಳೆದ 3 ವರ್ಷಗಳಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸ್ಪಡಿ ಸರ್ಕಲ್ ಮತ್ತು ಉದ್ಯೋಗ ಮೇಳ ಕಾರ್ಯಕ್ರಮಗಳಿಗೆ ನೀಡಲಾಗಿದ್ದ ಅನುದಾನ:-

| ಜಿಲ್ಲೆ | ಅನುದಾನ ಬಿಡುಗಡೆ ರೂ.ಗಳಲ್ಲಿ | ಅನುದಾನ ಖರ್ಚು ರೂ.ಗಳಲ್ಲಿ |
|---|---|---|
| ಕೋಲಾರ | 59,500 | 57,489 |
| ಚಿಕ್ಕಬಳ್ಳಾಪುರ | 1,47,500 | 1,44,030 |

ವಿವರಗಳು:-

| ಕಾರ್ಯಕ್ರಮಗಳು | ಕೋಲಾರ ಜಿಲ್ಲೆ | | ಚಿಕ್ಕಬಳ್ಳಾಪುರ ಜಿಲ್ಲೆ | |
|---|---|---|---|---|
| | ಅನುದಾನ ಬಿಡುಗಡೆ | ಅನುದಾನ ಖರ್ಚು | ಅನುದಾನ ಬಿಡುಗಡೆ | ಅನುದಾನ ಖರ್ಚು |
| ಎ) **2020-21** ಸಾಲಿನ ಕಾರ್ಯಕ್ರಮಗಳು | | | | |
| ಸ್ಪಡಿ ಸರ್ಕಲ್ | 26000 | 25000 | 26000 | 25000 |

| | | | | |
|---|---|---|---|---|
| ಒಟ್ಟು | 26,000 | 25,000 | 26,000 | 25,000 |
| **ಬಿ) 2021-22 ಸಾಲಿನ ಕಾರ್ಯಕ್ರಮಗಳು** | | | | |
| ಸ್ಪಡಿ ಸರ್ಕಲ್ | -- | -- | 26000 | 25000 |
| ಒಟ್ಟು | -- | -- | 26,000 | 25,000 |
| **ಸಿ) 2022-23 ಸಾಲಿನ ಕಾರ್ಯಕ್ರಮಗಳು** | | | | |
| ಸ್ಪಡಿ ಸರ್ಕಲ್ | 26,000 | 25,000 | 26,000 | 25,000 |
| ಎನ್ ಸಿ.ಎಸ್. ಮೇಳ | -- | -- | 62,000 | 61,950 |
| ಮಿನಿ ಉದ್ಯೋಗ ಮೇಳ | 7500 | 7489 | 7500 | 7080 |
| ಒಟ್ಟು | 33,500 | 32,489 | 95,500 | 94,030 |

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಯಾವುದೇ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ. ಆದಾಗ್ಯೂ ರಾಜ್ಯದಾದ್ಯಂತ ಜಾರಿಗೊಳಿಸಲಾದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಕೋಲಾರ ಜಿಲ್ಲೆಗೆ ರೂ.110.00 ಲಕ್ಷಗಳನ್ನು 1020 ಅಭ್ಯರ್ಥಿಗಳಿಗೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ರೂ.169.00 ಲಕ್ಷಗಳನ್ನು 1641 ಅಭ್ಯರ್ಥಿಗಳಿಗೆ ನೀಡಲಾದ ಕೌಶಲ್ಯ ತರಬೇತಿಗೆ, ತರಬೇತಿ ವೆಚ್ಚದ ರೂಪದಲ್ಲಿ ತರಬೇತಿ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

ಅದರಂತೆ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಕೋಲಾರ ಜಿಲ್ಲೆಗೆ ರೂ.12.46 ಲಕ್ಷಗಳನ್ನು 311 ಅಭ್ಯರ್ಥಿಗಳಿಗೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ರೂ.112.75 ಲಕ್ಷಗಳನ್ನು 1221 ಅಭ್ಯರ್ಥಿಗಳಿಗೆ ನೀಡಲಾದ ಕೌಶಲ್ಯ ತರಬೇತಿಗೆ, ತರಬೇತಿ ವೆಚ್ಚದ ರೂಪದಲ್ಲಿ ತರಬೇತಿ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

**ರಾಷ್ಟ್ರೀಯ ಜೀವನೋಪಾಯ ಅಭಿಯಾನ**

**ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (ಡೇ-ಎನ್.ಯು.ಎಲ್.ಎಂ)**

ಕಳೆದ 3 ವರ್ಷಗಳಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳವಾರು ಬಿಡುಗಡೆ ಮತ್ತು ಖರ್ಚಾದ ವಿವರವನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ.

**ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆ (ಡೇ-ಎನ್.ಆರ್.ಎಲ್.ಎಂ)**

ಕೌಶಲ್ಯಾಭಿವೃದ್ಧಿ ಇಲಾಖೆಯ ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್., ಸಂಸ್ಥೆಯು 3 ವರ್ಷದ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳು ಮತ್ತು ಬಿಡುಗಡೆ ಮತ್ತು ಖರ್ಚಾದ ವಿವರವನ್ನು **ಅನುಬಂಧ-3ರಲ್ಲಿ** ಲಗತ್ತಿಸಿದೆ.

| | |
|---|---|
| | ಸಿಡಾಕ್<br>ನಿರ್ದಿಷ್ಟವಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ. |

ಸಂಖ್ಯೆ: ಕೌಉಜೀಇ 03 ಕೌಗುಪ್ರ 2024

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

ಅನುಬಂಧ-1

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ "ಯುವ ನಿಧಿ ಯೋಜನೆ" ಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಪ್ರಸ್ತಾವನೆ:

ರಾಜ್ಯದಲ್ಲಿ ಪದವೀಧರ ನಿರುದ್ಯೋಗಿಗಳಿಗೆ ಮತ್ತು ಡಿಪ್ಲೋಮಾ ಪಾಸಾದ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆಯನ್ನು ನೀಡುವ ಸಂಬಂಧ "ಯುವ ನಿಧಿ ಯೋಜನೆ" ಯನ್ನು ಅನುಷ್ಠಾನಗೊಳಿಸಲು ದಿನಾಂಕ: 20.05.2023ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ/76/ಕೌಗುಇ/2023, ಬೆಂಗಳೂರು,**

**ದಿನಾಂಕ: 20.05.2023**

ರಾಜ್ಯದಲ್ಲಿ 2022-23ರಲ್ಲಿ ತೇರ್ಗಡೆಯಾದ ಪದವೀಧರ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ರೂ.3,000/- (ಮೂರು ಸಾವಿರ ರೂಪಾಯಿಗಳು ಮಾತ್ರ) ಹಾಗೂ ಡಿಪ್ಲೋಮಾ ಹೊಂದಿದ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ರೂ.1,500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ರಂತೆ ನಿರುದ್ಯೋಗ ಭತ್ಯೆ ನೀಡುವ "ಯುವ ನಿಧಿ ಯೋಜನೆ" ಯನ್ನು ಜಾರಿಗೊಳಿಸಲು ಸರ್ಕಾರವು ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ. ನಿರುದ್ಯೋಗ ಭತ್ಯೆಯನ್ನು ಉದ್ಯೋಗ ದೊರಕುವವರೆಗೆ ಅಥವಾ ಗರಿಷ್ಠ ಎರಡು ವರ್ಷಗಳ ಅವಧಿಗೆ ನೀಡಲಾಗುವುದು.

2. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ವಿವರವಾದ ಷರತ್ತು ಮತ್ತು ನಿಬಂಧನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

M.S. [signature] 20/5/2023

(ಎಂ.ಎಸ್. ವೆಂಕಟೇಶ್)
ಸರ್ಕಾರದ ಉಪ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ) / ಆಡಿಟ್-2), ಕರ್ನಾಟಕ, ಬೆಂಗಳೂರು.

....2.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ), ಸಿ.ಆ.ಸು. ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರದ ನಡಾವಳಿಗಳು**

**ವಿಷಯ** ರಾಜ್ಯದ ಪದವೀಧರರ / ಡಿಪ್ಲೋಮಾ ಪಡೆದ ನಿರುದ್ಯೋಗಿ ವಿದ್ಯಾವಂತ ಯುವ ಜನರಿಗೆ ನಿರುದ್ಯೋಗ ಭತ್ಯೆ ಪಾವತಿಸಲು **"ಕರ್ನಾಟಕ ಯುವ ನಿಧಿ ಯೋಜನೆ"** ಯನ್ನು ಜಾರಿಗೆ ತರುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರಿ ಆದೇಶದ ಸಂಖ್ಯೆ: ಕೌಉಜೀಇ / 76 / ಕೌಗುಇ / 2023, ದಿನಾಂಕ:20.05.2023.
2. ದಿನಾಂಕ: 02.06.2023 ರಂದು ನಡೆದ ಸಚಿವ ಸಂಪುಟದ ಸಭೆಯ ನಿರ್ಣಯ ಸಂಖ್ಯೆ:ಸಿ:319/2023.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿ 2022-23 ರಲ್ಲಿ ತೇರ್ಗಡೆಯಾದ ಪದವೀಧರ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ರೂ.3000/- (ಮೂರು ಸಾವಿರ ರೂ.ಗಳು ಮಾತ್ರ) ಹಾಗೂ ಡಿಪ್ಲೋಮಾ ಹೊಂದಿದ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ರೂ.1500/- (ಒಂದು ಸಾವಿರದ ಐದುನೂರು ರೂ.ಗಳು ಮಾತ್ರ) ರಂತೆ ನಿರುದ್ಯೋಗ ಭತ್ಯೆ ನೀಡುವ **"ಯುವ ನಿಧಿ ಯೋಜನೆ"** ಯನ್ನು ಜಾರಿಗೊಳಿಸಲು ಸರ್ಕಾರವು ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸಚಿವ ಸಂಪುಟದ ಅನುಮೋದನೆ ನಂತರ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಷರತ್ತು ಮತ್ತು ನಿಬಂಧನೆಗಳು ಹಾಗೂ ಅನರ್ಹತೆಯ ಮಾನದಂಡಗಳನ್ನು ವಿಧಿಸಿ ಆದೇಶ ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 55 ಕೈತಇ 2023, ದಿನಾಂಕ:03.06.2023

2023 ರ ವರ್ಷದಲ್ಲಿ ತೇರ್ಗಡೆಯಾಗಿ, ತೇರ್ಗಡೆಯಾದ ದಿನಾಂಕದಿಂದ 180 ದಿನಗಳು ಕಳೆದರೂ ಉದ್ಯೋಗ ಲಭಿಸದ ಪದವೀಧರ ನಿರುದ್ಯೋಗಿಗಳಿಗೆ (ವೃತ್ತಿಪರ ಕೋರ್ಸ್‌ಗಳು ಸೇರಿದಂತೆ) ಪ್ರತಿ ತಿಂಗಳು ರೂ.3000/- (ಮೂರು ಸಾವಿರ ರೂ.ಗಳು ಮಾತ್ರ) ನಿರುದ್ಯೋಗ ಭತ್ಯೆ ಹಾಗೂ ಡಿಪ್ಲೋಮಾ ಪಾಸಾದ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ರೂ.1500/- (ಒಂದು ಸಾವಿರದ ಐದುನೂರು ರೂ.ಗಳು ಮಾತ್ರ) ನಿರುದ್ಯೋಗ ಭತ್ಯೆಯನ್ನು ಉದ್ಯೋಗ ಸಿಗುವವರೆಗೆ ಅಥವಾ ಗರಿಷ್ಠ ಎರಡು ವರ್ಷಗಳ ಅವಧಿಗೆ ನೀಡಲು **"ಯುವ ನಿಧಿ ಯೋಜನೆ"** ಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು:**

1. ಪದವಿ / ಡಿಪ್ಲೋಮಾ ಮುಗಿಸಿ 6 ತಿಂಗಳಾದರೂ ಉದ್ಯೋಗ ಲಭಿಸದೇ ಇರುವ ಕನ್ನಡಿಗರಿಗೆ (Domicile of Karnataka) ಮಾತ್ರ ಈ ಯೋಜನೆಯು ಅನ್ವಯವಾಗುತ್ತದೆ.
2. ಈ ಸೌಲಭ್ಯವು ಎರಡು ವರ್ಷಗಳ ಅವಧಿಗೆ ಮಾತ್ರ ಅನ್ವಯಿಸುತ್ತದೆ. ಎರಡು ವರ್ಷಗಳ ಅವಧಿಯೊಳಗೆ ಉದ್ಯೋಗ ದೊರೆತಲ್ಲಿ ಫಲಾನುಭವಿಗೆ ಈ ಯೋಜನೆಯ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುವುದು.
3. ಭತ್ಯೆಯನ್ನು DBT ಮೂಲಕ ಒದಗಿಸಲು ಉದ್ದೇಶಿಸಲಾಗಿದ್ದು, ಫಲಾನುಭವಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು.
4. ನಿರುದ್ಯೋಗ ಸ್ಥಿತಿಯ ಬಗ್ಗೆ ಸ್ವತಂತ್ರ ಪರಿಶೀಲನೆ ಇರಬೇಕು ಉದ್ಯೋಗ ಪಡೆದ ನಂತರ ತಪ್ಪು ಘೋಷಣೆ ಅಥವಾ ಘೋಷಿಸಲು ವಿಫಲವಾದರೆ ದಂಡ ವಿಧಿಸಲಾಗುವುದು.

**ಯೋಜನೆಗೆ ಅರ್ಹರಾಗದೇ ಇರುವವರು:**

1. ಉನ್ನತ ವ್ಯಾಸಂಗಕ್ಕೆ ದಾಖಲಾತಿ ಹೊಂದಿ ವಿದ್ಯಾಭ್ಯಾಸ ಮುಂದುವರೆಸುವವರು.
2. ಶಿಶಿಕ್ಷು (Apprentice) ವೇತನವನ್ನು ಪಡೆಯುತ್ತಿರುವವರು.
3. ಸರ್ಕಾರಿ/ಖಾಸಗಿ ವಲಯದಲ್ಲಿ ಉದ್ಯೋಗ ಪಡೆದಿರುವವರು.

4. ರಾಜ್ಯ ಮತ್ತು ಕೇಂದ್ರದ ವಿವಿಧ ಯೋಜನೆಯಡಿ ಹಾಗೂ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಸ್ವಯಂ ಉದ್ಯೋಗ ಹೊಂದಿದವರು.

ಈ ಆದೇಶವನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ:319/2023, ದಿನಾಂಕ: 02.06.2023ರ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ಎಸ್. ವೆಂಕಟೇಶ್)
ಸರ್ಕಾರದ ಉಪ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ- ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 1000 ಪ್ರತಿಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಒದಗಿಸಲು.

**ಪ್ರತಿಗಳು:**

1. ಮಹಾಲೇಖಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
5. ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ.
6. ಸರ್ಕಾರದ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ).
7. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ಬೆಂಗಳೂರು.
8. ಖಜಾನೆ ಆಯುಕ್ತರು, ಖಜಾನೆ ಇಲಾಖೆ, ನಂ.3, 6ನೇ ಮಹಡಿ, KPCL ಹಸಿರು ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು.
10. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ (ನಗರ & ಗ್ರಾಮೀಣ), ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಜಿಟಿಟಿಸಿ, ಬೆಂಗಳೂರು.
12. ನಿರ್ದೇಶಕರು, ಸಿಡಾಕ್ - ಧಾರವಾಡ.
13. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು. (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ:319/2023, ದಿನಾಂಕ:02.06.2023)
14. ಜಂಟಿ ಕಾರ್ಯದರ್ಶಿ - ಕೆಜಿಟಿಟಿಐ.
15. ಖಜಾನಾಧಿಕಾರಿ, ರಾಜ್ಯಹುಜೂರ್ ಖಜಾನೆ, ಬೆಂಗಳೂರು.
16. ನಿರ್ದೇಶಕರು, ವಿಶೇಷ ಕೋಶ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
17. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3&9), ವಿಧಾನಸೌಧ, ಬೆಂಗಳೂರು.
18. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
19. ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯಿತಿಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು.
20. ಎಲ್ಲಾ ಜಿಲ್ಲೆಯ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳು.

**ಮಾಹಿತಿಗಾಗಿ:-**

1. ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು.

2. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. **ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.**

# Draft Guidelines for YUVANIDHI

1. Department of Industrial Training and Employment (DITE) will invite applications from unemployed degree / diploma holders who do not get employment even after 180 days of degree / diploma for providing unemployment allowance. Students who have graduated/diploma holders during the academic year 2022-23 (i.e., year of passing of examination should be 2023) will be eligible for registering for the Yuva Nidhi Scheme.
   a) **Exclusions:**
      i. Candidates received Apprentice stipend under National Apprentice Training Scheme (NATS) for graduates and diploma holders of MHRD, GoI and National Apprenticeship Promotion Scheme (NAPS) of Ministry of Skill Development and Entrepreneurship of GoI are not eligible.
      ii. Candidates who are employed in Govt. / Govt. aided undertaking / Pvt sectors.
      iii. Candidates who are self-employed.
      iv. Candidates continuing studies.

2. This scheme is applicable only for Kannadigas who are Domicile student of Karnataka and have not got employment for at least 6 months after passing graduation / diploma during 2023.
   a) **Domicile student means one who have studied in Karnataka at least for a period of 6 years up to Degree / Diploma. 6 years domicile requirement will be verified as below:**
      i. SSLC Marks Card, PUC Marks Card and Degree Certificate/Marks Cards OR
      ii. SSLC Marks Card, PUC Marks Card and Diploma Certificate or Marks Card OR
      iii. CET Registration Number and Degree Certificate OR
      iv. Ration Card Issue date and Degree Certificate.

   b) **Degree or Diploma certificate:**
      i. Candidate's Degree/Diploma Certificate or Provisional Degree/Diploma Certificate uploaded on NAD will be considered for verifying the candidate's graduation/ diploma status.
      ii. Universities and Boards must ensure that the students degree/diploma certificates or provisional degree/diploma certificates are uploaded to NAD within one week from the date of announcement of results.
      iii. Candidates must ensure that they have claimed their NAD certificate on DigiLocker by creating a DigiLocker account before proceeding with registration.

iv. Candidates can also check the availability of their degree/diploma certificates on DigiLocker by using the chatbot utility on NAD Karnataka portal.

3. Candidates must have a Bank account which is Aadhaar seeded for receiving Direct Benefit Transfers.

4. Candidates must ensure their Aadhaar is linked to their mobile number.

5. **Candidates interested to avail the benefits of Yuva Nidhi scheme are required to register for Yuva Nidhi Scheme:**
   i. Student who have all the requisite documents can apply in advance i.e. before completion of 180 days of receipt of Provisional Degree Certificate in Sevasindhu portal. But, the benefit will be given after completion of 180 days.
   ii. Candidate shall provide her/his Employment Registration Number and Aadhaar number.
   iii. Candidate shall confirm that she/he is unemployed and submit declaration to that effect.
   iv. Candidate must give an undertaking that she/he will inform immediately on becoming employed.
   v. False declaration or failure to declare employment will be penalised. Amount paid will be recovered along with legal action.
   vi. Registered candidates' details will be provided to the district Employment Officers shall, approve and issue sanction order to the eligible candidates.
   vii. The data of Yuvanidhi registered candidates will be pushed to Skill Connect Portal for checks regarding applicants with the database available in Skill Connect Portal.
   viii. Candidate must mandatorily confirm every month that he/she is unemployed.
      1. The candidate must furnish the declaration in the prescribed format for being employed or unemployed in Seva Sindhu Portal through Aadhaar based OTP on or before 25th of every month.
      2. Only on receipt of the declaration, the next payment shall be received.

6. **Release of funds and Payment Process:**
   a) Govt. will release funds to Commissioner, DITE.
   b) Commissioner, DITE to release funds to District Employment Officers who are DDOs.
   c) The DDOs shall push the payment instructions to Khajane 2 through the State DBT portal for making DBT.
   d) DDOs will generate bills and make payment in K2.

## NAD Fields for Yuva Nidhi Registration Form:

**Enter Aadhaar Number:** 0000 0000 0000

**Enter OTP:** XXXXXX

Aadhaar credentials authenticated successfully

OTP entered is incorrect

| | | |
|---|---|---|
| **Student Name (as per Aadhaar Card):** | Anand Sharma | (Auto-populated from Aadhaar Card and non editable) |
| **Select the category:** | ◉ **Degree Graduate** | ○ **Diploma Graduate** |
| **Select the University Name:** | Bangalore University | (select from dropdown list) |
| **Enter the University Registration Number:** | ABC 12345677 | (alphanumeric - no special characters ) |
| **Select the year of passing of examination:** | 2023 | (2023 is selected by default and non-editable) |

Certificate validated on National Academic Depository (NAD) database

Regrettably, your certificate has not been uploaded on National Academic Depository (NAD).
Kindly contact your university to get your certificate uploaded on NAD [illegible] again.

ANNEXURE

ಅನುಬಂಧ-2

## Chikkaballapura District & ULB's Component wise Release and Expenditure Details for the Financial Year 2021-22

**Release**

| SL..No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bagepalli | 0 | 0 | 0 | 433407 | 0 | 0 | 0 | 0 | 433407 |
| 2 | Chikkaballapura | 0 | 0 | 0 | 856097 | 125750 | 0 | 0 | 0 | 981847 |
| 3 | Chintamani | 0 | 0 | 0 | 3906776 | 0 | 0 | 0 | 0 | 3906776 |
| 4 | Chikkaballapura DSDO | 0 | 0 | 0 | 0 | 0 | 552000 | 550200 | 0 | 1102200 |
| 5 | Gudibande | 0 | 0 | 0 | 37900 | 0 | 0 | 0 | 0 | 37900 |
| 6 | Shidlaghatta | 0 | 0 | 0 | 0 | 0 | 0 | 0 | 0 | 0 |
| 7 | Gowribidanuru | 0 | 0 | 0 | 0 | 0 | 0 | 0 | 0 | 0 |
| | **Total** | **0** | **0** | **0** | **5234180** | **125750** | **552000** | **550200** | **0** | **6462130** |

**Expenditure**

| SL..No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bagepalli | 48800 | 0 | 0 | 518407 | 0 | 0 | 4500 | 0 | 571707 |
| 2 | Chikkaballapura | 7788 | 30000 | 0 | 856097 | 1986574 | 0 | 0 | 0 | 2880459 |
| 3 | Chintamani | 25417 | 508500 | 0 | 4184372 | 317131 | 0 | 0 | 0 | 5035420 |
| 4 | Chikkaballapura DSDO | 0 | 0 | 0 | 0 | 0 | 644000 | 550200 | 0 | 1194200 |
| 5 | Gudibande | 0 | 2200 | 18900 | 727584 | 0 | 0 | 0 | 0 | 748684 |
| 6 | Shidlaghatta | 0 | 0 | 0 | 0 | 0 | 0 | 0 | 0 | 0 |
| 7 | Gowribidanuru | 17994 | 0 | 39650 | 60750 | 0 | 0 | 0 | 0 | 118394 |
| | **Total** | **99999** | **540700** | **58550** | **6347210** | **2303705** | **644000** | **554700** | **0** | **10548864** |

## Chikkaballapura District & ULB's Component wise Release and Expenditure Details for the Financial Year 2022-23

**Release**

| SL..No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bagepalli | 0 | 289540 | 0 | 0 | 0 | 0 | 0 | 0 | 289540 |
| 2 | Chikkaballapura | 0 | 671616 | 0 | 162581 | 1078277 | 0 | 20000 | 0 | 1932474 |
| 3 | Chintamani | 0 | 33632 | 0 | 327923 | 173570 | 0 | 0 | 0 | 535125 |
| 4 | Chikkaballapura DSDO | 100425 | 1774135 | 0 | 0 | 0 | 0 | 1208000 | 0 | 3082560 |
| 5 | Gudibande | 0 | 6000 | 0 | 1298916 | 19989 | 0 | 10000 | 0 | 1334905 |
| 6 | Shidlaghatta | 0 | 62736 | 0 | 1537435 | 29972 | 0 | 0 | 0 | 1630143 |
| 7 | Gowribidanuru | 0 | 179132 | 0 | 89024 | 0 | 0 | 0 | 0 | 268156 |
| | **Total** | **100425** | **3016791** | **0** | **3415879** | **1301808** | **0** | **1238000** | **0** | **9072903** |

**Expenditure**

| SL..No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bagepalli | 0 | 289540 | 0 | 0 | 0 | 0 | 0 | 0 | 289540 |
| 2 | Chikkaballapura | 6958 | 671616 | 0 | 162581 | 1078277 | 0 | 20000 | 0 | 1939432 |
| 3 | Chintamani | 0 | 33632 | 0 | 327923 | 173570 | 0 | 351357 | 0 | 886482 |
| 4 | Chikkaballapura DSDO | 100425 | 1774135 | 0 | 0 | 0 | 0 | 1268656 | 0 | 3143216 |
| 5 | Gudibande | 0 | 6000 | 0 | 1298916 | 19989 | 0 | 10000 | 0 | 1334905 |
| 6 | Shidlaghatta | 0 | 62736 | 0 | 1537435 | 29972 | 0 | 0 | 0 | 1630143 |
| 7 | Gowribidanuru | 0 | 179132 | 0 | 89024 | 0 | 0 | 0 | 0 | 268156 |
| | **Total** | **107383** | **3016791** | **0** | **3415879** | **1301808** | **0** | **1650013** | **0** | **9491874** |

## Chikkaballapura District & ULB's Component wise Release and Expenditure Details for the Financial Year 2023-24

**Release**

| SL..No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bagepalli | 0 | 0 | 0 | 18000 | 20000 | 0 | 0 | 0 | 38000 |
| 2 | Chikkaballapura | 0 | 0 | 0 | 18000 | 25000 | 0 | 0 | 0 | 43000 |
| 3 | Chintamani | 0 | 0 | 0 | 18000 | 25000 | 0 | 0 | 0 | 43000 |
| 4 | Chikkaballapura DSDO | 0 | 1500000 | 0 | 0 | 0 | 828000 | 0 | 0 | 2328000 |
| 5 | Gudibande | 0 | 0 | 0 | 18000 | 15000 | 0 | 0 | 0 | 33000 |
| 6 | Shidlaghatta | 0 | 0 | 0 | 18000 | 25000 | 0 | 0 | 0 | 43000 |
| 7 | Gowribidanuru | 0 | 0 | 0 | 18000 | 25000 | 0 | 0 | 0 | 43000 |
| | **Total** | **0** | **1500000** | **0** | **108000** | **135000** | **828000** | **0** | **0** | **2571000** |

**Expenditure**

| SL..No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bagepalli | 0 | 0 | 0 | 0 | 0 | 0 | 0 | 0 | 0 |
| 2 | Chikkaballapura | 0 | 0 | 0 | 0 | 0 | 0 | 0 | 0 | 0 |
| 3 | Chintamani | 0 | 0 | 0 | 0 | 0 | 0 | 0 | 0 | 0 |
| 4 | Chikkaballapura DSDO | 0 | 865000 | 0 | 0 | 0 | 736000 | 0 | 0 | 1601000 |
| 5 | Gudibande | 0 | 0 | 0 | 0 | 0 | 0 | 0 | 0 | 0 |
| 6 | Shidlaghatta | 0 | 0 | 0 | 0 | 0 | 0 | 0 | 0 | 0 |
| 7 | Gowribidanuru | 0 | 0 | 0 | 0 | 0 | 0 | 0 | 0 | 0 |
| | **Total** | **0** | **865000** | **0** | **0** | **0** | **736000** | **0** | **0** | **1601000** |

ANNEXURE

## Kolar District & ULB's Component wise Release and Expenditure Details for the Financial Year 2021-22

### Release

| SL.No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bangarpete | 0 | 53220 | 0 | 18400 | 0 | 0 | 0 | 0 | 71620 |
| 2 | Kolar DSDO | 26774 | 0 | 0 | 0 | 0 | 1080660 | 0 | 0 | 1107434 |
| 3 | Kolar ULB | 0 | 0 | 0 | 97753 | 1398996 | 0 | 0 | 0 | 1496749 |
| 4 | Maluru | 0 | 30220 | 0 | 0 | 0 | 0 | 0 | 0 | 30220 |
| 5 | Mulabagal | 0 | 36349 | 0 | 10330 | 0 | 0 | 0 | 0 | 46679 |
| 6 | Robertsonpet KGI | 0 | 135648 | 0 | 0 | 1320519 | 0 | 0 | 0 | 1456167 |
| 7 | Srinivasapura | 0 | 0 | 0 | 0 | 0 | 0 | 0 | 0 | 0 |
| | Total | 26774 | 255437 | 0 | 126483 | 2719515 | 1080660 | 0 | 0 | 4208869 |

### Expenditure

| SL.No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bangarpete | 0 | 53220 | 0 | 18400 | 0 | 0 | 0 | 0 | 71620 |
| 2 | Kolar DSDO | 26774 | 0 | 0 | 0 | 0 | 1080660 | 566514 | 0 | 1673948 |
| 3 | Kolar ULB | 0 | 0 | 0 | 206503 | 272074 | 0 | 0 | 0 | 478577 |
| 4 | Maluru | 0 | 30220 | 0 | 27661 | 0 | 0 | 0 | 0 | 57881 |
| 5 | Mulabagal | 0 | 40444 | 0 | 11862 | 0 | 0 | 0 | 0 | 52306 |
| 6 | Robertsonpet KGI | 0 | 271296 | 0 | 32060 | 393422 | 0 | 0 | 0 | 696778 |
| 7 | Srinivasapura | 0 | 192408 | 0 | 0 | 0 | 0 | 0 | 0 | 192408 |
| | Total | 26774 | 587588 | 0 | 296486 | 665496 | 1080660 | 566514 | 0 | 3223518 |

## Kolar District & ULB's Component wise Release and Expenditure Details for the Financial Year 2022-23

### Release

| SL.No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bangarpete | 20000 | 28675 | 154957 | 79942 | 36000 | 0 | 15866 | 0 | 335440 |
| 2 | Kolar DSDO | 0 | 0 | 0 | 0 | 0 | 2662697 | 0 | 0 | 2662697 |
| 3 | Kolar ULB | 20000 | 282077 | 304080 | 120855 | 590055 | 0 | 19547 | 0 | 1336614 |
| 4 | Maluru | 40312 | 15000 | 40607 | 0 | 0 | 0 | 15010 | 0 | 110929 |
| 5 | Mulabagal | 30000 | 63543 | 0 | 95053 | 44400 | 0 | 18000 | 0 | 250996 |
| 6 | Robertsonpet KGI | 110000 | 96587 | 0 | 99900 | 383947 | 0 | 19730 | 0 | 710164 |
| 7 | Srinivasapura | 49290 | 50000 | 21000 | 13230 | 0 | 68510 | 14974 | 0 | 217004 |
| | Total | 269602 | 535882 | 520644 | 408980 | 1054402 | 2731207 | 103127 | 0 | 5623844 |

### Expenditure

| SL.No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bangarpete | 20000 | 30678 | 154957 | 85770 | 36000 | 0 | 15866 | 0 | 343271 |
| 2 | Kolar DSDO | 0 | 0 | 0 | 0 | 0 | 2662697 | 0 | 0 | 2662697 |
| 3 | Kolar ULB | 20000 | 282077 | 304080 | 120855 | 590055 | 0 | 19547 | 0 | 1336614 |
| 4 | Maluru | 40312 | 15000 | 40607 | 0 | 0 | 0 | 15010 | 0 | 110929 |
| 5 | Mulabagal | 30000 | 63543 | 0 | 95053 | 44400 | 0 | 18000 | 0 | 250996 |
| 6 | Robertsonpet KGI | 110000 | 96587 | 0 | 99900 | 561310 | 0 | 19730 | 0 | 887527 |
| 7 | Srinivasapura | 49290 | 50000 | 21000 | 13230 | 0 | 68510 | 14974 | 0 | 217004 |
| | Total | 269602 | 537885 | 520644 | 414808 | 1231765 | 2731207 | 103127 | 0 | 5809038 |

## Kolar District & ULB's Component wise Release and Expenditure Details for the Financial Year 2023-24

### Release

| SL.No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bangarpete | 0 | 0 | 0 | 18000 | 20000 | 0 | 0 | 0 | 38000 |
| 2 | Kolar DSDO | 0 | 1620000 | 0 | 0 | 0 | 828000 | 0 | 0 | 2448000 |
| 3 | Kolar ULB | 0 | 0 | 0 | 18000 | 25000 | 0 | 0 | 0 | 43000 |
| 4 | Maluru | 0 | 0 | 0 | 18000 | 20000 | 0 | 0 | 0 | 38000 |
| 5 | Mulabagal | 0 | 0 | 0 | 18000 | 25000 | 0 | 0 | 0 | 43000 |
| 6 | Robertsonpet KGI | 0 | 0 | 0 | 18000 | 25000 | 0 | 0 | 0 | 43000 |
| 7 | Srinivasapura | 0 | 0 | 0 | 18000 | 20000 | 0 | 0 | 0 | 38000 |
| | Total | 0 | 1620000 | 0 | 108000 | 135000 | 828000 | 0 | 0 | 2691000 |

### Expenditure

| SL.No | District & ULB's Name | SEP | SMID | ESTP | SUSV | SUH | CB&T | A&OE | IE&C | Total |
|---|---|---|---|---|---|---|---|---|---|---|
| 1 | Bangarpete | 0 | 0 | 0 | 0 | 0 | 0 | 0 | 0 | 0 |
| 2 | Kolar DSDO | 0 | 1064000 | 0 | 0 | 0 | 828000 | 0 | 0 | 1892000 |
| 3 | Kolar ULB | 0 | 0 | 0 | 0 | 0 | 0 | 0 | 0 | 0 |
| 4 | Maluru | 0 | 0 | 0 | 18000 | 500 | 0 | 0 | 0 | 18500 |
| 5 | Mulabagal | 0 | 0 | 0 | 0 | 24000 | 0 | 0 | 0 | 24000 |
| 6 | Robertsonpet KGI | 0 | 0 | 0 | 0 | 0 | 0 | 0 | 0 | 0 |
| 7 | Srinivasapura | 0 | 0 | 0 | 0 | 0 | 0 | 0 | 0 | 0 |
| | Total | 0 | 1064000 | 0 | 18000 | 24500 | 828000 | 0 | 0 | 1934500 |

## ಅನುಬಂಧ-3

(ರೂ.ಲಕ್ಷಗಳಲ್ಲಿ)

| ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್ | | | | | | | |
|---|---|---|---|---|---|---|---|
| ಕ್ರ. ಸಂ | ಯೋಜನೆಯ ಹೆಸರು | 2020-21 | | 2021-22 | | 2022-23 | |
| | | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
| 1 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ | 12.87 | 8.69 | 19.79 | 19.17 | 9.00 | 13.00 |
| 2 | ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರಗಳು | 1.00 | 0.2 | 1.00 | - | 1.00 | - |
| 3 | ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಉದ್ಯೋಗ ಮೇಳ ಸಂಘಟಿಸಲು) | 4.00 | - | 4.00 | - | 0.14 | - |

| ಕೋಲಾರ ಜಿಲ್ಲಾ ಪಂಚಾಯತ್ | | | | | | | |
|---|---|---|---|---|---|---|---|
| ಕ್ರ. ಸಂ | ಯೋಜನೆಯ ಹೆಸರು | 2020-21 | | 2021-22 | | 2022-23 | |
| | | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
| 1 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ | 6.97 | 6.32 | 5.09 | 5.04 | 27.37 | 25.75 |
| 2 | ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರಗಳು | 15.00 | 15.00 | - | - | - | - |
| 3 | ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಉದ್ಯೋಗ ಮೇಳ ಸಂಘಟಿಸಲು) | 5.00 | - | 5.00 | - | - | - |